ಆಧಾರಗಳು ಇಲ್ಲದಿದ್ದರಿಂದ ೧೭-೧೧-೧೯೮೭ ರಂದು 'ಬಿ' ಅಂತಿಮ ವರದಿಯನ್ನು ಕೊಟ್ಟು ತನಿಖೆಯನ್ನು ಮುಕ್ತಾಯ ಮಾಡಲಾಯಿತು. ಇದರ ಬಗ್ಗೆ ಕಾನೂನು ಪ್ರಕಾರ ಫಿರ್ಯಾದಿಗೆ ಸೂಚನೆಯನ್ನು ಕೊಡಲಾಗಿತ್ತು.

೪) ಮೇಲೆ ಹೇಳಿದಂತೆ ಈ ಎರಡು ನಿರ್ದಿಷ್ಟ ಪ್ರಕರಣಗಳಲ್ಲಿ ಸಾಕ್ಷ್ಯಾಧಾರಗಳು ಇಲ್ಲದಿದ್ದುದರಿಂದ ಪೋಲೀಸರು ಸೂಕ್ತ ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಕಳುಹಿಸಿದ್ದಾರೆ ಮತ್ತು ಈ ಕ್ರಮದಿಂದ ಅತೃಪ್ತಿ ಹೊಂದಿದ ಹಲವರು ಇದರ ಬಗ್ಗೆ ಅರ್ಜಿಗಳನ್ನು ಸಲ್ಲಿಸಿದ್ದು ಅವನ್ನು ಉನ್ನತ ಮಟ್ಟದಲ್ಲಿ ಪರಿಶೀಲಿಸಿ ಆ ದೂರಿನಲ್ಲಿ ಸತ್ಯಾಂಶಗಳು ಇಲ್ಲವೆಂದು ವರದಿಯಾಗಿದೆ.

೧-೦೦ ಪಿ. ಎಂ.

೧೨) ಬಳ್ಳಾರಿ ಜಿಲ್ಲೆಗೆ ಡಿ. ಸಿ. ಹೆಚ್. ೫೨ ಹತ್ತಿ ಬೀಜವನ್ನು ಹೆಚ್ಚಿನ ಪ್ರಮಾಣದಲ್ಲಿ ಒದಗಿಸಲು ಮನವಿ

ಶ್ರೀ ಸಿ. ಎಂ. ರೇವಣಸಿದ್ದಯ್ಯ.— ಮಾನ್ಯ ಅಧ್ಯಕ್ಷರೇ, ಬಳ್ಳಾರಿ ಜಿಲ್ಲೆಗೆ ಡಿ. ಸಿ. ಹೆಚ್. ೫೨ ಹತ್ತಿ ಬೀಜ ಕೇವಲ ೫೦ ಕ್ವಿಂಟಾಲ್ ಒದಗಿಸಿರುವುದು ಏನೂ ಸಾಲದು. ತುಂಗಭದ್ರ ಜಲಾಶಯದ ಅಡಿಯಲ್ಲಿ ವಾಂಗಾರಿ ಬೆಳೆಯಲ್ಲಿ ಸುಮಾರು ೬೦ ಸಾವಿರ ಎಕರೆ ಮತ್ತು ಮಳೆ ಆಸರೆಯಲ್ಲಿ ೩೦ ಸಾವಿರ ಎಕರೆ ಒಟ್ಟು ಸುಮಾರು ೯೦ ಸಾವಿರ ಎಕರೆಯಲ್ಲಿ ಡಿ. ಸಿ. ಹೆಚ್. ೫೨ ಹತ್ತಿ ಬೆಳೆ ಅನಿವಾರ್ಯ ಬೆಳೆ ಮಾಡುವುದುಂಟು. ೯೦ ಸಾವಿರ ಎಕರೆಗೆ ಕನಿಷ್ಠ ೬೦೦ ಕ್ವಿಂಟಾಲ್ ಹತ್ತಿ ಬೀಜದ ಅಗತ್ಯ ಇದೆ ಇಷ್ಟನ್ನು ಒದಗಿಸತಕ್ಕದ್ದು.

ಇದೇ ಸಂದರ್ಭದಲ್ಲಿ ಧಾರವಾಡ ಜಿಲ್ಲೆಗೆ ೫೦೦ ಕ್ವಿಂಟಾಲ್, ಚಿತ್ರದುರ್ಗಕ್ಕೆ ೨೦೦ ಕ್ವಿಂಟಾಲ್ ಡಿ. ಸಿ ಹೆಚ್. ೫೨ ಕೊಟ್ಟಿರುವುದು ಸರಿಯಷ್ಟೆ. ಇದೇ ಲೆಕ್ಕಾಚಾರದಲ್ಲಿ ಬಳ್ಳಾರಿಗೂ ಕನಿಷ್ಠ ೫೨೦ ಕ್ವಿಂಟಾಲ್ ಬೀಜವನ್ನಾದರೂ ಕೊಡಲು ಈ ಮೂಲಕ ಆಗ್ರಹ ಪಡಿಸುತ್ತೇನೆ. ಮಾನ್ಯ ಕೃಷಿ ಸಚಿವರು ಪರಿಶೀಲಿಸಿ ತೀರ್ಮಾನಿಸಲಿ.

ಶ್ರೀ ಆರ್. ವಿ. ದೇಶಪಾಂಡೆ.— ಮಾನ್ಯ ಅಧ್ಯಕ್ಷರೇ, ಈಗಾಗಲೇ ನಾನು ಹೇಳಿದ ಹಾಗೆ ಹತ್ತಿಗೆ ಬೆಳೆಗೆ ತೀರಾ ಹೆಚ್ಚು ದರ ಬಂದು ರಾಜ್ಯದ ಎಲ್ಲ ಭಾಗಗಳಲ್ಲಿ ರೈತರು ಹತ್ತಿ ಬೆಳೆಯನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಆದರೆ ನಮ್ಮ ಬೀಜ ನಿಗಮದಿಂದ ಬೀಜದ ಕೊರತೆ ಇದೆ. ಅದು ನಿಜ. ಬಳ್ಳಾರಿ ಜಿಲ್ಲೆಗೆ ಕೇವಲ ೫೭ ಕ್ವಿಂಟಾಲ್ ಕೊಡಬೇಕಾಗಿದೆ ಆ ಪೈಕಿ ಅಲ್ಲಿಗೆ ೫೭.೬೨ ರಷ್ಟು ಅಲಾಟ್ ಮಾಡಿದ್ದೇವೆ. ಮಾನ್ಯ ರೇವಣಸಿದ್ದಯ್ಯನವರು ಹೇಳಿದ ಹಾಗೆ ಡಿಮಾಂಡ್ ಜಾಸ್ತಿ ಆದುದು ನಿಜ. ಆದುದರಿಂದ ಎಷ್ಟು ಬೀಜ ಹೆಚ್ಚು ಕೊಡುವುದಕ್ಕೆ ಸಾಧ್ಯವಿದೆಯೋ ಅಷ್ಟನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಬೇರೆ ಬೇರೆ ರಾಜ್ಯಗಳಿಂದ ಮಹಾರಾಷ್ಟ್ರ ಮತ್ತು ಗುಜರಾತ್ ನಿಂದ ಸರ್ಟಿಫೈಡ್ ಸೀಡ್ಸ್ ಬರಬೇಕಾಗಿದೆ. ಪ್ರೈವೇಟ್ ಕಂಪನಿಯವರಿಗೂ ಸಹ ಇದರ ಬಗ್ಗೆ ಪರವಾನಗಿಯನ್ನು ಕೊಟ್ಟಿದ್ದೇವೆ. ಅಲ್ಲಿಂದ ಸರ್ಟಿಫೈಡ್ ಸೀಡ್ಸ್ ಡಿ ಸಿ. ಹೆಚ್. ೫೨ ಬಂದ ನಂತರ ಬಳ್ಳಾರಿ ಜಿಲ್ಲೆಗೆ ಬೀಜವನ್ನು ವಿತರಣೆ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.

೧೩) ಕೇರಳದ ಗಡಿಯಾದ ಮಾವುಕುಟ್ಟದಲ್ಲಿ ಗೇರು ಬೀಜ ವ್ಯಾಪಾರಕ್ಕೆ ಶೆಡ್ ಹಾಕಲು ಪರವಾನಿಗೆ ನೀಡುವ ಕುರಿತು

ಶ್ರೀ ಡಿ. ಎ ಚಿನ್ನಪ್ಪ.—ಮಾನ್ಯ ಅಧ್ಯಕ್ಷರೇ, ಕೇರಳದ ಗಡಿಯಾದ ಮಾವುಕುಟ್ಟದಲ್ಲಿ ಪ್ರತಿವರ್ಷ ಫೆಬ್ರುವರಿಯಿಂದ ಮೇ ತಿಂಗಳ ತನಕ ಗೇರು ಬೀಜ ವ್ಯಾಪಾರವಾಗುತ್ತದೆ. ಕೇರಳದಿಂದ ಬಂದ ಗೇರು ಬೀಜವನ್ನು ವ್ಯಾಪಾರಸ್ಥರು ಖರೀದಿ ಮಾಡಿ ತಮಿಳುನಾಡಿನಲ್ಲಿ ಮಾರಾಟ ಮಾಡುತ್ತಾರೆ. ಈತನಕ ಅಲ್ಲಿ ವ್ಯಾಪಾರ ಮಾಡಲು ಅರಣ್ಯ ಇಲಾಖೆಯ ಅಧಿಕಾರಿಯಾದ ಡಿ ಎಫ್. ಓ. ರವರು ಷೆಡ್ ಹಾಕಲು ಹುಕುಂ ಕೊಡುತ್ತಿದ್ದರು, ಈ ವ್ಯಾಪಾರಿಯಿಂದ ಕರ್ನಾಟಕ ಸರ್ಕಾರದಲ್ಲಿ ಸುಮಾರು ೮೦ ಲಕ್ಷದಿಂದ